ಕಂಪನಿ'ಗೆ. ಅದಕ್ಕೆ ಕಾರಣವೂ ಇತ್ತು. ಕಂಪನಿಯಲ್ಲಿ ಅನೇಕ ಸಂಗೀತಗಾರರಿದ್ದರು. ಸವಾಯಿ ಗಂಧರ್ವರ ಶಿಷ್ಯ ವೆಂಕಟರಾವ್ ರಾಮದುರ್ಗ ಅವರೂ ಅಲ್ಲಿದ್ದರು. ಇಲ್ಲಿದ್ದರೆ ಮಗಳು ಸಂಗೀತದಲ್ಲಿ ಸಾಧನೆ ಮಾಡಲು ಅನುಕೂಲ ಎಂಬುದು ತಾಯಿಯ ಆಸೆ. ಸೋನುಬಾಯಿಗೆ ನಾಯಕಿ ಪಾತ್ರಗಳು ಅನಾಯಾಸವಾಗಿ ಬರುತ್ತಿದ್ದವು. ಅದರಲ್ಲಿ ಪೌರಾಣಿಕ, ಚಾರಿತ್ರಿಕ ಹಾಗೂ ಸಾಮಾಜಿಕ ನಾಟಕಗಳೂ ಇದ್ದವು.

ರಾಮಾಯಣದಲ್ಲಿ ಸೀತೆಯಾಗಿ ವೀಕ್ಷಕರನ್ನು ಸೆಳೆದಿದ್ದ ಸೋನುಬಾಯಿ 'ಕೃಷ್ಣಗಾರುಡಿ'ಯಲ್ಲಿ ಸತ್ಯಭಾಮೆಯಾಗಿ, 'ಕೃಷ್ಣಲೀಲೆ'ಯಲ್ಲಿ ರಾಧೆಯಾಗಿ ಮಿಂಚಿದರು. 'ಲಂಕಾದಹನ'ದಲ್ಲಿ ಸೀತೆಯಾಗಿ ಸೋನುಬಾಯಿ ಅಭಿನಯ–ಗಾಯನ– ಸಂಭಾಷಣೆ ಶೈಲಿ ಪ್ರೇಕ್ಷಕರನ್ನು ಹಿಡಿದಿಟ್ಟವು. ಅಂಬಾ ಪ್ರಸಾದಿಕಾ ನಾಟಕ ಮಂಡಲಿಯ ತಾರೆ ಎನಿಸಿಕೊಂಡ ಈ ನಟಿ ಸಾಮಾಜಿಕ ನಾಟಕ 'ಚಂದ್ರಾವತಿ'ಯಲ್ಲಿ ಮತ್ತಷ್ಟು ಪ್ರಸಿದ್ಧಿ ಗಳಿಸಿದರು.

ಇಲ್ಲಿ ನಾಟಕಗಳ ಜೊತೆ ವೆಂಕಟರಾವ್ ರಾಮದುರ್ಗ ಅವರ ಸಂಗೀತ ಶಿಕ್ಷಣವೂ ಇತ್ತು. ವೆಂಕಟರಾವ್ ಕಂಪನಿ ಬಿಟ್ಟಾಗ ಪೀರಮ್ಮ ಮಗಳನ್ನು ಕಂಪನಿ ಬಿಡಿಸಿ ಉಳಿದ ಮಕ್ಕಳಿದ್ದ ಹಾವೇರಿಗೆ ಬಂದು ನೆಲೆನಿಂತರು. ಸಂಗೀತ ವಿದ್ವಾಂಸ ಶಂಕರ ಬುವಾ ಹುಬ್ಬಳ್ಳಿಯಲ್ಲಿದ್ದರು. ಪೀರವ್ವ ಶಿಕ್ಷಣ ಪಡೆಯಲು ಅವರ ಬಳಿ ಮಗಳನ್ನು ಸೇರಿಸಿದರು. ಸೋನುಬಾಯಿ ಹಿಂದಿನ ಗುರು ವೆಂಕಟರಾವ್ ಹುಬ್ಬಳ್ಳಿಯಲ್ಲಿ ನೆಲೆಸಿದ್ದರು. ಇಬ್ಬರು ಗುರುಗಳಿಂದ ಸಂಗೀತ ಪಾಠಗಳಾಗುತ್ತಿದ್ದವು. ಅದೇ ಸಂದರ್ಭ ಸೋನುಬಾಯಿ ಅವರ ಲಗ್ನ ಭೀಮರಾವ್ ವೈದ್ಯ ಅವರೊಂದಿಗೆ ನೆರವೇರಿತು.

ಎರಡು ವರ್ಷಗಳ ಅವಧಿಯಲ್ಲಿ ಸಂಗೀತದ ಇನ್ನಷ್ಟು ಪಟ್ಟುಗಳನ್ನು ಗುರುಗಳಿಂದ ಕಲಿತರು. ಅದೇ ಹೊತ್ತಿಗೆ 'ಸಂದೇಹ ಸಾಮ್ರಾಜ್ಯ' ಎಂಬ ನಾಟಕವೊಂದನ್ನು ಹವ್ಯಾಸಿಗಳ ಗುಂಪು ಹುಬ್ಬಳ್ಳಿಯಲ್ಲಿ ಪ್ರದರ್ಶಿಸಲು ಮುಂದಾಗಿತ್ತು. ಗುರು ವೆಂಕಟರಾವ್ ಅವರ ಅಪೇಕ್ಷೆಯಂತೆ 'ಶತ ತಾರಾ' ಪಾತ್ರವನ್ನು 'ಸಂದೇಹ ಸಾಮ್ರಾಜ್ಯ'ದಲ್ಲಿ ವಹಿಸಿದರು.

ರಾಮದುರ್ಗ ವೆಂಕಟರಾವ್ ಮತ್ತು ಸೋನುಬಾಯಿ ಅವರು ನೂತನ ಸಂಗೀತ ನಾಟಕ ಮಂಡಲಿ ಎಂಬ ಕಂಪನಿಯಯನ್ನು ಸ್ಥಾಪಿಸಿದರು. ಗುರು–ಶಿಷ್ಯೆ ಕಂಪನಿ ಮಾಲೀಕರು. ಈ ನೂತನ ಕಂಪನಿ ಅಭಿನಯಿಸಿದ್ದು 'ಶಿವಶರಣೆ ಅಕ್ಕ ಮಹಾದೇವಿ' ನಾಟಕವನ್ನು. ಬಾಡಿಗೆ ಪರಿಕರಗಳನ್ನು ಹೊಂದಿಸಿಕೊಂಡು ಥಿಯೇಟರ್‌ಗಳನ್ನು ಬಾಡಿಗೆಗೆ ಪಡೆದು ನಾಟಕಗಳನ್ನು ಪ್ರದರ್ಶಿಸಿದರು.

ಮುಂದೆ 'ಕಾಲೇಜ್ ಗರ್ಲ್', 'ಲಂಕಾದಹನ', 'ಹೇಮರೆಡ್ಡಿ ಮಲ್ಲಮ್ಮ' ನಾಟಕಗಳು ನೂತನ ನಾಟಕ ಕಂಪನಿಗೆ ಹಣ, ಹೆಸರು ತಂದುಕೊಟ್ಟವು. ಕುಟುಂಬ ವ್ಯವಹಾರದಲ್ಲಿ ಆದ ಏರಿಪೇರಿನಿಂದ ವೆಂಕಟರಾವ್ ಸ್ವಂತ ಊರಿಗೆ ಹೋದವರು ಮತ್ತೆ ಮರಳಲಿಲ್ಲ. ಕಂಪನಿ ವ್ಯವಸ್ಥೆಯಲ್ಲಿ ಏರಿಳಿತಗಳಾದರೂ ಸೋನುಬಾಯಿ ಎದೆಗುಂದಲಿಲ್ಲ. ಮುಖ್ಯ ಕಲಾವಿದರು ಕಂಪನಿ ತ್ಯಜಿಸಿದಾಗ ತೊಂದರೆಗಳು ಶುರುವಾದವು. ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿ ತೊಳಲಾಡಿದ ಸೋನುಬಾಯಿ ಕಂಪನಿಯನ್ನು ವಿಸರ್ಜಿಸಲು ತೀರ್ಮಾನಿಸಿದರು.

ರಂಗಭೂಮಿಯಲ್ಲಿ ಕಷ್ಟಕ್ಕೀಡಾದರೂ ಸಂಗೀತ ಕಛೇರಿಗಳು ಸೋನುಬಾಯಿ ಅವರ ಕೈಬಿಡಲಿಲ್ಲ. ಖ್ಯಾತ ಹಿಂದೂಸ್ತಾನಿ ಗಾಯಕ ಮಲ್ಲಿಕಾರ್ಜುನ ಮನ್ಸೂರ್ ಸಹೋದರ ಬಸವರಾಜ ಮನ್ಸೂರ್ ಕಂಪನಿಯಲ್ಲಿ ಕೆಲಕಾಲ ಅಭಿನಯಿಸಿದರೂ ಸಂಗೀತ ಕಛೇರಿಗಳಿಗೆ ಹೆಚ್ಚಿನ ಸಮಯ ಮೀಸಲಿಟ್ಟರು. ಸೋನುಬಾಯಿ ಆಕಾಶವಾಣಿಯಲ್ಲೂ ಕಛೇರಿ ಕೊಟ್ಟರು, ರಂಗಗೀತೆಗಳನ್ನು ಹಾಡಿದರು.

✤